# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 15.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ. ಎಂ ಡಿ ಎಸ್ ರವರಿಂದ

ನಿಮ್ಮ ತವರು ಮನೆ ಮತ್ತು ಗಂಡನ ಮನೆ ಎರಡೂ ಬೆಣಚಗೆರೆ ಎಂದರೆ ಸರಿ. ನೀವು ಬೆಣಚಗೆರೆಯಲ್ಲಿಯೇ ಹುಟ್ಟಿ ಬೆಳೆದಿದ್ದರಿಂದ ಊರಿನಲ್ಲಿ ಎಲ್ಲರೂ ಗೊತ್ತು ಎಂದರೆ ಸರಿ. ನಿಮ್ಮ ತಂದೆಗೆ ಎಷ್ಟು ಜನ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಎಂದರೆ ಸಾಕ್ಷಿಯು ನನ್ನ ತಂದೆಗೆ ಒಬ್ಬ ತಮ್ಮ ಮತ್ತು ಇಬ್ಬರು ತಂಗಿಯರು ಇದ್ದಾರೆ ಎಂದು ನುಡಿಯುತ್ತಾರೆ. ಅವರುಗಳೆಂದರೆ ಗಂಗಾಣಮ್ಮ ಮತ್ತು ಶಿವಮ್ಮ ಮತ್ತು ಸಂಗಪ್ಪ ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ತಂದೆ ಹೆಸರು ಏನು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸುವ ನಿಮ್ಮ ತಾತ ಅಥವಾ ಮುತ್ತಾತನ ಹೆಸರಿನಲ್ಲಿ ಇದ್ದ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ತಾತ ಅಥವಾ ಮುತ್ತಾತನ ಹೆಸರಿನಲ್ಲಿ ಇರುವ ಪಹಣಿಗಳು ಅಥವಾ ಯಾವುದೇ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತು ನಿಮ್ಮ ತಂದೆಯ ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ ಮತ್ತು ನಿಮ್ಮ ತಂದೆಯ ಪ್ರತ್ಯೇಕ ಆಸ್ತಿ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ಭಾಗಂಶ ಕೋರಲು ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು ಅವರ ಅಕ್ಕ ತಂಗಿಯರು ಭಾಗ

ಮಾಡಿಕೊಂಡಿದ್ದಾರಾ ಎಂದರೆ ಸಾಕ್ಷಿಯು ನನ್ನ ತಂದೆಯ ಅಕ್ಕ ತಂಗಿಯರು ಭಾಗ ಮಾಡಿಕೊಂಡಿಲ್ಲ ಆದರೆ ನನ್ನ ತಂದೆ ಮತ್ತು ಅವರ ತಮ್ಮ ಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಈ ಹಿಂದೆ ಪಾಟೀ ಸವಾಲಿನಲ್ಲಿ ಹೇಳಿರುವಂತೆ ನೀವು ಮತ್ತು ನಿಮ್ಮ ಅಕ್ಕ ತಂಗಿಯರು ಮಾಡಿಕೊಂಡಿದ್ದೀರಿ ಎಂದು ಹೇಳಲಾದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಯಾವುದೇ ಭಾಗ ಆಗಿರುವುದಿಲ್ಲ ಆದರೆ ನನ್ನ ತಾಯಿಗೆ ಹಕ್ಕು ಖುಲಾಸೆ ಬರೆದುಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನೀವು ನಿಮ್ಮ ತಾಯಿಗೆ ಬರೆದುಕೊಟ್ಟಿದ್ದೀರಿ ಎಂದು ಹೇಳಲಾದ ಹಕ್ಕು ಖುಲಾಸೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸ್ದಿರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಆದರೆ ಅದನ್ನು ಈ ದಾವಾ ಆಸ್ತಿಗೆ ಬರೆದುಕೊಟ್ಟಿಲ್ಲ ಮನೆಗೆ ಸಂಬಂಧಿಸಿದಂತೆ ಬರೆದುಕೊಟ್ಟಿದ್ದೆವು ಎಂದು ನುಡಿಯುತ್ತಾರೆ. ನಿಮ್ಮ ತಾಯಿಗೆ ಯಾವುದೇ ಹಕ್ಕು ಖುಲಾಸೆ ಪತ್ರವನ್ನು ನೀವು ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿಯು ಈ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗೆ ಬರೆದುಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ತಾಯಿಗೆ ಹಕ್ಕು ಖುಲಾಸೆ ಬರೆದುಕೊಟ್ಟಿದ್ದೀರಿ ಎಂದು ಹೇಳಲಾದ ಬೇರೆ ಆಸ್ತಿಗಳನ್ನು ಈ ದಾವಾದಲ್ಲಿ ನೀವು ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಯಾವ ದಿನಾಂಕದಂದು ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿದ್ದೀರಿ ಎಂದರೆ ದಿನಾಂಕ ನೆನಪಿಲ್ಲ ಆದರೆ 2015 ರಲ್ಲಿ ಬರೆದುಕೊಟ್ಟಿದ್ದೆವು ಎಂದು ನುಡಿಯುತ್ತಾರೆ. ನೀವು ಯಾವುದೇ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಡದೇ ಇರುವುದರಿಂದ ನಿಮಗೆ ದಿನಾಂಕವನ್ನು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ.

2. ನಿಮ್ಮ ತಾಯಿ ಒಟ್ಟು ಕುಟುಂಬದ ಆಸ್ತಿಗೆ ಸಂಬಂಧಿಸಿದಂತೆ ನಿಮ್ಮ ಅಕ್ಕನಾದ ಶಿವಗಂಗಾ ರವರಿಗೆ ಬರೆದುಕೊಟ್ಟಿರುವ ದಾನ ಪತ್ರದಲ್ಲಿನ ಸ.ನಂ.316/3 ರ 1 ಎಕರೆ 39 ವರೆ ಗುಂಟೆ ಆಸ್ತಿಯನ್ನು ಈ ದಾವಾದಲ್ಲಿ ನೀವು ಸೇಪರ್ಡೆ ಮಾಡಿಲ್ಲ ಎಂದರೆ ಸರಿ. 7 ನೇ ಪ್ರತಿವಾದಿಯು ಜಮೀನನ್ನು ಕೊಂಡ ದಿನದಿಂದ ಅವರೇ ದಾವಾ ಸ್ವತ್ತಿನಲ್ಲಿ ಅಡಿಕೆ ಮತ್ತು ತೆಂಗಿನ ಬೆಳೆಯನ್ನು ಬೆಳೆಸಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ

ಕ್ರಯ ತೆಗೆದುಕೊಳ್ಳಬೇಕಾದಾಗ ನಮ್ಮ ಭಾಗದ ಆಸ್ತಿಯನ್ನು ಬಿಟ್ಟು ಬೇರೆ ಭಾಗದ ಆಸ್ತಿಯಲ್ಲಿ ಸ್ವಾಧೀನ ಮುಂದುವರೆಸುವಂತೆ ಮಾತುಕತೆಯಾಗಿತ್ತು ಎಂದು ನುಡಿಯುತ್ತಾರೆ. ನಿಮಗೆ ಆರೋಗ್ಯ ಸರಿ ಇಲ್ಲದೇ ಇದ್ದ ಕಾರಣ ನೀವು ಆ ದಿನ ಬಂದು ಕ್ರಯ ಪತ್ರಕ್ಕೆ ಸಹಿ ಮಾಡಿರಲಿಲ್ಲ ಎಂದರೆ ಸರಿಯೇ. ಪೂರ್ತಿ ಆಸ್ತಿಯಲ್ಲಿ 7 ನೇ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ 15 ವರ್ಷಕ್ಕೂ ಹಳೆಯ ಅಡಿಕೆಯನ್ನು ಬೆಳೆದಿದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ಸಾಕಷ್ಟು ಖರ್ಚು ಮಾಡಿ ದಾವಾ ಸ್ವತ್ತನ್ನು ಅಭಿವೃದ್ಧಿ ಮಾಡಿದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ತೋಟದಲ್ಲಿ ಅಡಿಕೆ ಗಿಡಗಳು ಇರುತ್ತವೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ತಾನು ಕ್ರಯಕ್ಕೆ ಕೊಂಡ ದಿನದಿಂದ ದಾವಾ ಸ್ವತ್ತಿಗೆ ಕಂದಾಯವನ್ನು ಕಟ್ಟುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದು ತೋರಿಸುವ ಯಾವುದೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಿಮ್ಮ ತಂದೆಯ ಪ್ರತ್ಯೇಕ ಆಸ್ತಿಯಾಗಿದ್ದು ಅವರೇ ದಾವಾ ಸ್ವತ್ತನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ದಾವಾ ಸ್ವತ್ತಿನಲ್ಲಿ ನಿಮಗೆ ಯಾವುದೇ ಭಾಗಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಜಮೀನುಗಳು ಮತ್ತು ಒಟ್ಟು ಕುಟುಂಬದ ಮನೆಯನ್ನು ನೀವು ಈ ದಾವಾದಲ್ಲಿ ಸೇಪರ್ಡೆ ಮಾಡದೇ ಇರುವುದರಿಂದ ಈ ದಾವಾ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಗ್ರಾಮದಲ್ಲಿ 7 ನೇ ಪ್ರತಿವಾದಿಯನ್ನು ಕಂಡರೇ ನಿಮಗೆ ಆಗದೇ ಇರುವುದರಿಂದ ಅವರಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ.5 ರ ಪ್ರಮಾಣ ಪತ್ರದಲ್ಲಿ ಒಟ್ಟು ಕುಟುಂಬದ ನಿಮ್ಮ ಅತ್ತೆಂದಿರನ್ನು ವಂಶವೃಕ್ಷದಲ್ಲಿ ಮತ್ತು ಈ ದಾವಾದಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಆಸ್ತಿಯಾಗಿರುವುದರಿಂದ ಅವರು ಬೇಕಿಲ್ಲ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.